ತನ್ನ ಏಕತಾರಿ ಮೀಟುತ್ತಾ ತತ್ತ್ವಪದಗಳನ್ನು ಹಾಡುತ್ತಿದ್ದರೆ, ಅವರ ಪಕ್ಕದಲ್ಲೇ ಕಾವಲಯ್ಯನವರು ದಮಡಿ ನುಡಿಸುತ್ತಿದ್ದರು. ಸಂಯಮ ಮತ್ತು ಪ್ರಸನ್ನತೆ ಅವರನ್ನು ಯಾವಾಗಲೂ ಸುತ್ತುವರೆದಿರುತ್ತಿತ್ತು. ನನ್ನ ಎಳವೆಯ ಕಣ್ಣುಗಳಿಂದ ನೋಡಿದಂತೆ; ಸರಳ ಮತ್ತು ಸೌಂದರ್ಯದ ಖನಿಯಾಗಿದ್ದ ಈ ಹಾಡುಗಳು, ಆಧ್ಯಾತ್ಮಿಕ ರೂಪದಲ್ಲಿಯೂ ಹಾಗೂ ವಾಸ್ತವದಲ್ಲಿಯೂ ನಮ್ಮನ್ನು ಒಳಗೊಳ್ಳುತ್ತಾ ಸಾಗುತ್ತಿತ್ತು. ಹೀಗೆ ಬೆಳಗಾಗುವವರೆಗೂ ರವಳಪ್ಪನವರ ಹಾಡುಗಳು ದಣಿವಿಲ್ಲದೆ ಉರಿಯುವ ದೀಪದಂತೆ ಪ್ರಜ್ವಲಿಸುತ್ತಿದ್ದವು.ಅವರ ಹಾಡುಗಳಿಗೆ ಮನಸ್ಸಿಗಂಟಿದ್ದ ತೊಡೆಯಲಾಗದ ದುಃಖವನ್ನು ಶಮನಗೊಳಿಸುವ ಮಾಯಾ ಶಕ್ತಿ ಇರುತ್ತಿತ್ತು. ಈ ಹಾಡುಗಳು ಅನಿಶ್ಚಿತ ಲೌಕಿಕತೆ ಹಾಗೂ ಆಧ್ಯಾತಿಕ ಹಂಬಲದ ಸೌಂದರ್ಯವನ್ನು ಹೊರಸೂಸುವಂತಿರುತ್ತಿದ್ದವು. ನಮ್ಮ ಪಾಲಿಗೆ ಇವು ಓದುವ ಪಠ್ಯವಾಗಿರದೆ, ಕೇಳುವ ಪಠ್ಯವಾಗಿದ್ದವು. ನಾವೆಲ್ಲ ಬೆಳೆದಿದ್ದು ಕೇಳುಗರಾಗಿಯೇ ಹೊರತು ಓದುಗರಾಗಿ ಅಲ್ಲ! ರವಳಪ್ಪ ಅವರು ಹಾಡುತ್ತಿದ್ದ ಹಾಡುಗಳು ಮನುಷ್ಯನನ್ನು ಕೇವಲ ಆಧ್ಯಾತ್ಮಿಕ ಉನ್ನತಿಗೇರಿಸುವ ಹಾಡುಗಳಾಗಿರಲಿಲ್ಲ. ಆ ಹಾಡುಗಳಿಗೆ ಮನಸ್ಸನ್ನು ಕರಗಿಸುವ ಮತ್ತು ನಮ್ಮ ವರ್ತಮಾನವನ್ನು ರೆಕ್ಕೆಗಳನ್ನಾಗಿ ಪರಿವರ್ತಿಸುವ ದಿವ್ಯ ಶಕ್ತಿಯಿತ್ತು. ಸಾವೂ ಕೂಡ ಇವರ ಮುಂದೆ ಕೆಲಹೊತ್ತು ಕುಳಿತು ಹಾಡುಗಳಿಗೆ ಕಿವಿಗೊಟ್ಟು ಹೋಗುತ್ತಿತ್ತು.

ಈ ಮೂವರಿಗೂ ಅಂದಂದಿಗೆ ಬೇಕಿರುವಷ್ಟು ಅನ್ನ, ದೇಹ ಮುಚ್ಚಲು ಬಟ್ಟೆ, ವಾಸಿಸಲು ಅಂಗೈಯಗಲದ ಗೂಡು, ಇವಿಷ್ಟೇ ಇವರ ಲೌಕಿಕದ ಸಂಪತ್ತಾಗಿತ್ತು. ಇವರಲ್ಲಿ ಕಾವಲಯ್ಯ ಮತ್ತು ರವಳಪ್ಪನವರಿಗೆ ಇರಲು ಮನೆಯೇ ಇರಲಿಲ್ಲ. ಕಾವಲಯ್ಯನವರು ಊರಮುಂದಲ ಗಿರಿಯಣ್ಣನವರ ತೋಟದಲ್ಲಿದ್ದ ಮಂಚಿಕೆಯಲ್ಲಿ ಮಲಗುತ್ತಿದ್ದರು. ರವಳಪ್ಪನವರಿಗೆ ಭಜನೆ ಮನೆಯೇ ವಾಸಸ್ಥಳವಾಗಿತ್ತು. ನಾನು ನೋಡಿದಂತೆ ರವಳಪ್ಪ ಮತ್ತು ಕಾವಲಯ್ಯನವರಿಗೆ ಹೆಂಡತಿ ಮಕ್ಕಳು ಅಥವಾ ಬಂಧು ಬಳಗ ಯಾರೂ ಇದ್ದಂತೆ ಕಾಣಲಿಲ್ಲ. ಆದರೆ ಇಡೀ ಊರಿನವವರನ್ನೇ ಇವರು ತಮ್ಮ ಬಳಗವೆಂದು ತಿಳಿದಿದ್ದರು. ಸಂತರಿಗೆ ಮಾತ್ರ ಇರುವ ತಿಳಿವಳಿಕೆ ಇದು. ಉಳಿದವರೆಲ್ಲಾ ಮಠಗಳನ್ನು ಕಟ್ಟಿಕೊಂಡು ತನುವಿನಿಂದ ಯೋಗಿಗಳಾಗಿದ್ದರೆ, ಇವರು ಮನದೊಳಗೆ ಯೋಗಿಗಳಂತೆ ಜೀವಿಸುತ್ತಿದ್ದರು. ಯಾವುದೇ ಧಾರ್ಮಿಕ ನಂಬಿಕೆಗಳ ಆಲಿಂಗನಕ್ಕೆ ಒಳಗಾಗದೆ ಪರಿಶುದ್ಧ ಆಧ್ಯಾತ್ಮಿಕತೆಯ ಹಾದಿಯಲ್ಲಿದ್ದ ಸಂತರು. ನಾನು ಶಾಲೆಗೆ ಸೇರುವ ಹೊತ್ತಿಗಾಗಲೇ ಈ ಮೂವರೂ ತಮ್ಮ ಬದುಕಿನ ಪಯಣದಲ್ಲಿ ಮುಕ್ಕಾಲುಪಾಲು ದಾರಿಯನ್ನು ಕ್ರಮಿಸಿದ್ದರು. ನಿರ್ಗಮನದ ದಾರಿಯನ್ನು ಹುಡುಕುತ್ತಿದ್ದ ಇವರ ಕಣ್ಣುಗಳು, ಆಸೆ, ಲೌಕಿಕ ವ್ಯಸನ ಮತ್ತು ಬಂಧನಗಳಿಂದ ಬಿಡುಗಡೆಗೊಂಡು ನಿರಾಳ ಸ್ಥಿತಿಯಲ್ಲಿದ್ದವು. ಈ ಮೂವರ ಕಥೆಗಳು ಕೆಲವು ಸಮಾನವಾದ ಎಳೆಗಳಿಂದ ನೇಯ್ಗೆಗೊಂಡಿದ್ದರೂ, ಅವರವರ ಕಥೆಯ ವಿಸ್ತರಣೆಗೆ ಅವರದೇ ಆದ ವಿಶಿಷ್ಟತೆಯ ಹೊಳಪಿದೆ. ನಾನು ಬಲ್ಲಂತೆ ಈ ಮೂವರೂ ತಮ್ಮ ಬದುಕಿನ ಹಿಂದಿನ ದಿನಗಳನ್ನು ಕುರಿತು ಎಂದೂ ನೆನೆಯುತ್ತಿರಲಿಲ್ಲ. ವರ್ತಮಾನದ ಬದುಕಿನಲ್ಲಿ ತಾವು ಅನುಭವಿಸಿದ ಯಾತನೆಗಳನ್ನು, ದುರಂತಗಳನ್ನು ಹೇಳುತ್ತಾ ಎಂದೂ ಪ್ರಲಾಪಿಸುತ್ತಿರಲಿಲ್ಲ! ಹಾಗೂ ತಮ್ಮ ಭವಿಷ್ಯದ ಬದುಕಿನ ಬಗ್ಗೆ ಎಂದೂ ಆತಂಕ ವ್ಯಕ್ತಪಡಿಸುತ್ತಿರಲಿಲ್ಲ. ಇವರದು ಸಮತೋಲನದ ಜಗತ್ತು. ಇಂತಹ ಫಲಭರಿತ ಮರಗಳ ನೆರಳಿನಲ್ಲಿ ನಾನು ನನ್ನ ಬಾಲ್ಯವನ್ನು ಕಳೆದೆ. ನನ್ನ ಬದುಕಿನ ಬಹುದೊಡ್ಡ ಸೌಭಾಗ್ಯ ಇದು.

ನಮ್ಮ ಊರಿನ ಕೆರೆ ಏರಿ ಇಳಿದು ಕೇರಿಯೊಳಗೆ ಹೋಗುವ ದಾರಿಯ ಮೊದಲ ತುದಿಯಲ್ಲೇ